ಅವರೇ ಸ್ವತಃ ಆಧ್ಯಾತ್ಮಿಕ ಜೀವನದತ್ತ ಒಲವಿದ್ದ ಸುಧೀರಾಳನ್ನು ನಿವೇದಿತಾ ಶಾಲೆಗೆ ತಂದುಬಿಟ್ಟರು. ಇಲ್ಲಿಂದ ಮುಂದೆ ಸ್ವಾಮೀಜಿಯ ಭವಿಷ್ಯದ್ವಾಣಿಗಳು ಒಂದೊಂದಾಗಿ ಕಾರ್ಯರೂಪಕ್ಕೆ ಬರುವುದನ್ನು ಕಾಣುತ್ತೇವೆ. ನಿವೇದಿತಾ ತನ್ನ ಸ್ಕೂಲನ್ನು ಆರಂಭಿಸಿದ ನಂತರ ಸ್ವಾಮೀಜಿ ಹೇಳಿದರು: "ದೊಡ್ಡ ಆಲದಮರ ಸಣ್ಣ ಸಸಿಯಾಗಿರುವಾಗ ನೋಡಿದರೆ, ಮುಂದೆ ಅದೊಂದು ಬೃಹದಾಕಾರದ ಆಲದ ಮರವಾಗುತ್ತದೆಂದು ಯಾರಿಗಾದರೂ ಕಲ್ಪನೆ ಮಾಡಿಕೊಳ್ಳಲು ಸಾಧ್ಯವೇ, ಈಗ ಈ ರೂಪದಲ್ಲಿಯೇ ಸ್ತ್ರೀಮಠವನ್ನು ಆರಂಭ ಮಾಡುತ್ತೇನೆ... ನೋಡುತ್ತಿರು, ಸಮಯ ಕಳೆದಂತೆ ಇದರ ಪ್ರಭಾವ ದೇಶದಲ್ಲೆಲ್ಲಾ ಹರಡುತ್ತದೆ."

ಸುಧೀರಾಳ ತ್ಯಾಗ ಹಾಗೂ ಸೇವೆಯ ಜೀವನದತ್ತ ವಿದ್ಯಾರ್ಥಿನಿಯರು ಬಹುಬೇಗ ಆಕರ್ಷಿತರಾದರು. ನಿವೇದಿತಾ ಆಕೆಯನ್ನು ಶ್ರೀಮಾತೆಯ ಬಳಿ ಕರೆದುಕೊಂಡು ಹೋದರು. ಸುಧೀರಾ ಶ್ರೀಮಾತೆಯಿಂದ ಮಂತ್ರದೀಕ್ಷೆಯನ್ನು ಪಡೆದರು. "ಶ್ರೀಮಾತೆಯ ಕಣ್ಣೆದುರಿಗೇ, ಸ್ತ್ರೀಮಠವನ್ನು ಸ್ಥಾಪಿಸಬೇಕೆಂಬ ಸ್ವಾಮೀಜಿಯ ಇಚ್ಛೆಯನ್ನು ನಾವು ಪೂರ್ಣಗೊಳಿಸೋಣ. ಸಂನ್ಯಾಸಿನಿಯರ ಆಶ್ರಮವೊಂದನ್ನು ಆರಂಭಿಸಿಬಿಡೋಣ..." ಎಂಬ ತರುಣಿ ಸುಧೀರಾಳ ಉತ್ಸಾಹಕ್ಕೆ, ನಿವೇದಿತಾ ಮತ್ತು ಕ್ರಿಸ್ಟೀನರು ಕಡಿವಾಣ ಹಾಕಿದರು. ಈಗತಾನೇ ಮಹಿಳೆಯರ ವಿದ್ಯಾಭ್ಯಾಸದ ಪ್ರಚಾರ ಆರಂಭವಾಗಿರುವಾಗ ಯಾವುದೇ ರೀತಿಯ ವಿಪರೀತ ಹೆಜ್ಜೆಯನ್ನಿಡಲು ನಿವೇದಿತಾ, ಕ್ರಿಸ್ಟೀನಾ ಸಿದ್ಧರಾಗಿರಲಿಲ್ಲ.

ಶ್ರೀಮಾತೆಯ ಶಿಷ್ಯೆಯಾದ ನಿವೇದಿತಾರ ವಿದ್ಯಾರ್ಥಿನಿ ಸರಳಾದೇವಿ, ವಿವಾಹ ಜೀವನವನ್ನು ನಡೆಸಲು ಇಷ್ಟಪಡದಿದ್ದಾಗ, ಸುಧೀರಾ ಆಕೆಗೆ ಮನೆಬಿಟ್ಟು ಹೊರಬರುವಂತೆ ಪ್ರೋತ್ಸಾಹಿಸಿದರು. ಈ ಘಟನೆ ಆಗಿನ ಕಾಲದ ಸಮಾಜದಲ್ಲಿ ಕೋಲಾಹಲವನ್ನೆಬ್ಬಿಸಿತು. ಇದರಿಂದ ಸಿಸ್ಟರ್ ನಿವೇದಿತಾ ಮತ್ತು ಶ್ರೀಮಾತೆ ಇಬ್ಬರೂ ಚಿಂತೆಗೆ ಒಳಗಾದರು. ಕಡೆಯಲ್ಲಿ ಸರಳಾದೇವಿಯ ವೈರಾಗ್ಯವನ್ನು ಗುರುತಿಸಿದ ಶ್ರೀಮಾತೆ, ಆಕೆಗೆ ತಮ್ಮ ಬಳಿಯೇ ಆಶ್ರಯವನ್ನಿತ್ತರು. ಈ ಸರಳಾದೇವಿಯೇ ಮುಂದೆ ಪ್ರವ್ರಾಜಿಕಾ ಭಾರತೀಪ್ರಾಣಾ ಎಂಬ ಹೆಸರಿನಲ್ಲಿ ಸಂನ್ಯಾಸವನ್ನು ಸ್ವೀಕರಿಸಿ ಶ್ರೀಶಾರದಾ ಮಠದ ಮೊದಲನೆಯ ಅಧ್ಯಕ್ಷರಾದರು.

ಸಿಸ್ಟರ್ ನಿವೇದಿತಾರ ಶರೀರ ತ್ಯಾಗದ ನಂತರ, ಕ್ರಿಸ್ಟೀನ್ ಮತ್ತು ಸುಧೀರಾ ಅತ್ಯಂತ ದಕ್ಷತೆಯಿಂದ ಸ್ಕೂಲಿನ ಕೆಲಸವನ್ನು ಮುಂದುವರಿಸಿದರು. ೧೯೧೪ರಲ್ಲಿ ಅಮೆರಿಕಾಕ್ಕೆ ಹೋದ ಕ್ರಿಸ್ಟೀನ್ ಮೊದಲ ವಿಶ್ವಯುದ್ಧ ಆರಂಭವಾದ್ದರಿಂದ ಕೂಡಲೇ ಭಾರತಕ್ಕೆ ಹಿಂದಿರುಗಲಾಗಲಿಲ್ಲ. ಅವರು ಸುಧೀರಾಳಿಗೆ ಪತ್ರ ಬರೆದು ಶಾಲೆಯನ್ನು ನಡೆಸುವ ಸಂಪೂರ್ಣ ಸ್ವಾತಂತ್ರ್ಯವನ್ನು ಆಕೆಗೆ ಕೊಟ್ಟರು. ಕೂಡಲೇ ಸುಧೀರಾ ಮಾಡಿದ ಮೊದಲ ಕೆಲಸವೆಂದರೆ ನಿವೇದಿತಾ ಸ್ಕೂಲಿನಲ್ಲಿ 'ಮಾತೃಮಂದಿರ' ಎಂಬ ಹೆಸರಿನಲ್ಲಿ ಆಶ್ರಮ ವಿಭಾಗವನ್ನು ಆರಂಭಿಸಿದ್ದು. ಇಲ್ಲಿ ತಮ್ಮ ಜೀವನವನ್ನು ಸೇವೆ ಮತ್ತು ಆಧ್ಯಾತ್ಮಿಕ ಸಾಧನೆಗೆ ಮುಡಿಪಾಗಿಡಲು ಇಚ್ಛಿಸುವ ತರುಣಿಯರಿಗೆ ಮತ್ತು ದೂರದ ಸ್ಥಾನಗಳಿಂದ ವಿದ್ಯಾಭ್ಯಾಸಕ್ಕೆ ಬರುವ ವಿದ್ಯಾರ್ಥಿನಿಯರಿಗೆ ವಸತಿಯ ಅವಕಾಶವನ್ನು ಕಲ್ಪಿಸಲಾಯಿತು. ಶ್ರೀಮಾತೆ ತಾವಾಗಿಯೇ ಬಂದು ಈ ಆಶ್ರಮದಲ್ಲಿ ಒಂದು ತಿಂಗಳಷ್ಟು ಕಾಲ ನೆಲೆಸಿ, ಸುಧೀರಾಳ ಕೆಲಸಗಳನ್ನು ಮನತುಂಬಿ ಹೊಗಳಿದರು. ಇಲ್ಲಿಗೆ ಸೇರಲು ಯಾರಾದರೂ ಹುಡುಗಿಯರು ಮುಂದೆ ಬಂದಿದ್ದಾರೆಂದು ತಿಳಿದರೆ ಅವರು ಆನಂದವನ್ನು ವ್ಯಕ್ತಪಡಿಸುತ್ತಿದ್ದರು. ೧೯೧೪ರಲ್ಲಿ ನಿವೇದಿತಾ ಸ್ಕೂಲ್ ರಾಮಕೃಷ್ಣ ಮಿಷನ್ನಿನ ಅಧೀನವಾಯಿತು. ಶ್ರೀಮಾತೆಯವರ ಶರೀರತ್ಯಾಗದ ನಂತರ ಈ ಮಾತೃಮಂದಿರಕ್ಕೆ 'ಶಾರದಾ ಮಂದಿರ' ಎಂದು ಹೆಸರಿಡಲಾಯಿತು. ೧೯೨೦ ರ ನವೆಂಬರ್ ೨೪ರಂದು ಸುಧೀರಾ ದೇವಿ ತಮ್ಮ ೩೩ನೇ ವಯಸ್ಸಿನಲ್ಲಿ, ಕಾಶಿಗೆ ಹೋಗುವಾಗ ರೈಲಿನಿಂದ ಆಕಸ್ಮಿಕವಾಗಿ ಬಿದ್ದು, ತೀರಿಕೊಂಡರು. ಸ್ವಾಮಿ ಶಾರದಾನಂದರು ಆಕೆಯನ್ನು ಬ್ರಹ್ಮಚಾರಿಣಿ ಸುಧೀರಾ ಎಂದು ಕರೆದು **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಮಹಾಮಂತ್ರದ ವ್ರತಧಾರಿಣಿ ಎಂದು ಕೊಂಡಾಡುತ್ತಾರೆ.

೧೯೪೬ರಿಂದ ಮುಂದೆ ಕೆಲವು ವಿದ್ಯಾವಂತ ತರುಣಿಯರು ಸ್ವಾಮಿ ವಿವೇಕಾನಂದರ ಆದರ್ಶದಂತೆ ಜೀವನ ನಡೆಸುವ ಉದ್ದೇಶದಿಂದ, ನಿವೇದಿತಾ ಸ್ಕೂಲಿಗೆ ಬಂದು ಸೇರಿದರು. ಇದೇ ಸಮಯದಲ್ಲಿ ಕೊಲ್ಕತಾದ ಟಾಕಿ ಎಂಬ ಜಾಗದಲ್ಲಿ ಕೆಲವರು ಯುವತಿಯರು ಒಂದು ಆಶ್ರಮವನ್ನು ಸ್ಥಾಪಿಸಿ, ಒಟ್ಟಾಗಿ ನೆಲೆಸಲಾರಂಭಿಸಿದ್ದರು. 'ಶಾರದಾ ಆಶ್ರಮ' ಎಂಬ ಹೆಸರಿನ ಈ ಆಶ್ರಮವು ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳಿಂದ ಮಾರ್ಗದರ್ಶನವನ್ನೂ ಬೆಂಬಲವನ್ನೂ ಪಡೆಯಿತು. ಅಂದಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ವಿರಜಾನಂದರು ಇವರೆಲ್ಲರ ಉತ್ಸಾಹವನ್ನೂ, ಸಂನ್ಯಾಸಿ ಜೀವನಕ್ಕಾಗಿನ ತೀವ್ರ ಆಕಾಂಕ್ಷೆಯನ್ನೂ ಕಂಡು ೧೯೪೬ ರಲ್ಲಿ ನಡೆದ ರಾಮಕೃಷ್ಣ ಮಠದ ಸಂನ್ಯಾಸಿ ಸಮ್ಮೇಳನದಲ್ಲಿ ಹೀಗೆ ಹೇಳಿದರು: "...ಸ್ವಾಮಿ ವಿವೇಕಾನಂದರು ಬಯಸಿದಂತೆ ಒಂದು ಸ್ತ್ರೀಮಠವನ್ನು ಸ್ಥಾಪಿಸುವ ಬಗ್ಗೆ ಗಮನಕೊಡಬೇಕಾದ ಸಮಯ ಈಗ ಬಂದಿದೆ." ೧೯೪೮ ರಲ್ಲಿ ರಾಮಕೃಷ್ಣ ಮಠದ ಕಾರ್ಯದರ್ಶಿಗಳಾದ ಸ್ವಾಮಿ ವೀರೇಶ್ವರಾನಂದರು ಈ ಬಗ್ಗೆ ಪ್ರಸ್ತಾಪಿಸಿ, "ತ್ಯಾಗ ಜೀವನವನ್ನು ನಡೆಸಲು ಟಾಕಿಯ ಶಾರದಾ ಆಶ್ರಮದಲ್ಲಿ ಸೇರಿರುವ ಮಹಿಳೆಯರು ಮೊದಲು ರಾಮಕೃಷ್ಣ ಮಿಷನ್ನಿನ ಕೈಕೆಳಗೆ ಒಟ್ಟಾಗಲಿ. ನಂತರ ಸಮಯ ಬಂದಾಗ ಸ್ವತಂತ್ರವಾಗಿ ಸ್ತ್ರೀಮಠವನ್ನು ಆರಂಭಿಸಬಹುದು" ಎಂದು ಹೇಳಿದರು. ಇದಾದ ನಂತರ, ೧೯೫೦ ರಲ್ಲಿ ಶಾರದಾ ಆಶ್ರಮದ ಸದಸ್ಯೆಯರು ರಾಮಕೃಷ್ಣ ಮಿಷನ್ನಿಗೆ ಸೇರಿದ ಬಾಗ್‌ಬಜಾರಿನ ನಿವೇದಿತಾ ಸ್ಕೂಲಿನ ಶ್ರೀಶಾರದಾ ಮಂದಿರದ ಸದಸ್ಯೆಯರೊಂದಿಗೆ ಒಟ್ಟಾದರು. ಇದನ್ನು ಕೇಳಿ ಆನಂದದಿಂದ ತಮ್ಮ ಆಶೀರ್ವಾದವನ್ನು ತಿಳಿಸುತ್ತಾ ಸ್ವಾಮಿ ವಿರಜಾನಂದರು ಹೀಗೆ ಬರೆಯುತ್ತಾರೆ: "... ನನ್ನ ಜೀವನದಲ್ಲಿಯೇ ಇದನ್ನು ನೋಡುತ್ತೇನೆಂದು ನಾನು ಕಲ್ಪಿಸಿಯೂ ಇರಲಿಲ್ಲ. ಮಹಿಳೆಯರಲ್ಲಿ ತ್ಯಾಗದ ಜ್ಯೋತಿ ಬೆಳಗಲಿ, ಆಧ್ಯಾತ್ಮಿಕ ಚೈತನ್ಯ ಜಾಗೃತವಾಗಲಿ ಎಂಬ ಸ್ವಾಮಿ ವಿವೇಕಾನಂದರ ಇಚ್ಛೆ ಪೂರ್ಣವಾಗಿಯೇ ಆಗುವುದೆಂದು ನನ್ನ ಹೃದಯದ ಅಂತರಂಗಲ್ಲಿ ನನಗೆ ಸದಾ ಅನಿಸುತ್ತಿತ್ತು..."


ಈ ಸಮಯದಲ್ಲಿ ಕೇರಳದ ರಾಮಕೃಷ್ಣ ಮಠದಲ್ಲಿಯೂ ತ್ಯಾಗ ಮತ್ತು ಸೇವೆಯ ಜೀವನ ನಡೆಸುವ ಅಭಿಲಾಷೆಯಿಂದ ಕೆಲವರು ವಿದ್ಯಾವಂತ ಮಹಿಳೆಯರು ಬಂದು ಸೇರಿದ್ದರು.

೧೮೯೯ ರ ಮಾರ್ಚ್ ೧೨ ರ ತಮ್ಮ ಒಂದು ಪತ್ರದಲ್ಲಿ ಸಿಸ್ಟರ್ ನಿವೇದಿತಾ ಬರೆಯುತ್ತಾರೆ: "ಗಂಗೆಯ ಪೂರ್ವದಡದಲ್ಲಿರುವ ದಕ್ಷಿಣೇಶ್ವರದತ್ತ ಬೆರಳು ಮಾಡಿ ತೋರಿಸಿ, ಭವಿಷ್ಯದಲ್ಲಿ ಆ ಜಾಗದಲ್ಲಿ ಶ್ರೀಮಾತೆ ಹಾಗೂ ನಾನು ನೆಲೆಸಲು ಯೋಗ್ಯವಾದ ಜಾಗವನ್ನು ಗೊತ್ತುಮಾಡಲಾಗುವುದು ಎಂದು ಸ್ವಾಮೀಜಿ ಹೇಳಿದರು..."

೧೯೫೧ ರಲ್ಲಿ ದಕ್ಷಿಣೇಶ್ವರ ಕಾಳೀ ದೇವಸ್ಥಾನದ ಹತ್ತಿರದಲ್ಲಿಯೇ ಒಂದು ಜಮೀನನ್ನು ಕೊಳ್ಳಲಾಯಿತು. ಈ ಜಮೀನನ್ನು ಕೊಳ್ಳಲು ಸ್ವಾಮಿ ಅಖಿಲಾನಂದರು ಅಮೆರಿಕಾದಿಂದ ನಲ್ವತ್ತು ಸಾವಿರ ಡಾಲರನ್ನು ಕಳುಹಿಸಿದರು. ೧೯೫೪ ರಲ್ಲಿ ಶ್ರೀಮಾತೆಯ ಜನ್ಮ ಶತಮಾನೋತ್ಸವದ ಸಮಯದಲ್ಲಿ, ಸ್ತ್ರೀಮಠವನ್ನು ಆರಂಭಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ಆಗಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಶಂಕರಾನಂದರ ಮಾತಿಗೆ ಒಪ್ಪಿಕೊಂಡು, ಸರಳಾದೇವಿ ತಮ್ಮ ೨೭ ವರ್ಷಗಳ ಏಕಾಂತದ ತಪಸ್ಸಿನ ಜೀವನವನ್ನು ಕೊನೆಗೊಳಿಸಿ, ಕಾಶಿಯಿಂದ ಕೊಲ್ಕತಾಗೆ ಬಂದರು.

ರಾಮಕೃಷ್ಣ ಮಠದ ನಿಯಮಗಳಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಸ್ತ್ರೀಮಠವನ್ನು ನಡೆಸಲು ಸಂನ್ಯಾಸಿನಿಯರು ತಯಾರಾಗುವವರೆಗೂ, ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳು ದೂರದಿಂದಲೇ ಅವರ ಕೆಲಸಗಳಿಗೆ ಮಾರ್ಗದರ್ಶಿಯಾಗಿ ನಿಲ್ಲಲಿ." ೧೯೫೪ರಿಂದ ೧೯೫೮ ರವರೆಗೆ ಶಾರದಾ ಮಠವು ಬೇಲೂರಿನ ರಾಮಕೃಷ್ಣ ಮಠದ ಶಾಖಾಕೇಂದ್ರವಾಗಿತ್ತು. ಸ್ವಾಮೀಜಿ ಮತ್ತೂ ನಿರ್ದೇಶಿಸಿದ್ದರು, "ಮುಂದೆ, ಸರಿಯಾದ ಸಮಯ ಬಂದಾಗ ಮಹಿಳೆಯರು ಸ್ವತಂತ್ರವಾಗಿ ತಮ್ಮ ಕೆಲಸಗಳನ್ನು ತಾವೇ ನೋಡಿಕೊಳ್ಳಲಿ, ತಮಗೆ ಬರುವ ಅಡಚಣೆಗಳನ್ನು ತಾವೇ ನಿವಾರಿಸಿಕೊಳ್ಳಲಿ. ಬೇರೆಯವರ ಸಹಾಯದ ಅಗತ್ಯವಿಲ್ಲ." ೧೯೫೯ರ ಆಗಸ್ಟ್ ೨೭ರಂದು 'ಶಾರದಾ ಮಠ'ವು ಸ್ವತಂತ್ರವಾದ ಸಂಸ್ಥೆಯಾಯಿತು. ಆ ಸಮಯಕ್ಕಾಗಲೇ ಭಾರತದ ವಿಭಿನ್ನ ರಾಜ್ಯಗಳಿಂದ ವಿದ್ಯಾವಂತ ಯುವತಿಯರು ಈ ಮಠಕ್ಕೆ ಸೇರಲು ಬರತೊಡಗಿದರು. ಶ್ರೀಮಾತೆಯಿಂದ ದೀಕ್ಷೆ ಪಡೆದಿದ್ದ ಹಾಗೂ ಸಿಸ್ಟರ್ ನಿವೇದಿತಾ ಮತ್ತು ಸುಧೀರಾರ ವಿದ್ಯಾರ್ಥಿನಿಯಾಗಿದ್ದ ಸರಳಾದೇವಿ, ಸಂನ್ಯಾಸ ದೀಕ್ಷೆಯ ನಂತರ 'ಪ್ರವ್ರಾಜಿಕಾ ಭಾರತೀ ಪ್ರಾಣಾ' ಎಂಬ ಹೆಸರನ್ನು ಪಡೆದು, ಈ ಮಠದ ಮೊದಲ ಅಧ್ಯಕ್ಷರಾದರು. ಅವರು ತಮ್ಮ ತಪಸ್ಯೆಯ ಜೀವನದಿಂದ ಎಲ್ಲರಿಗೂ ಮಾರ್ಗದರ್ಶಿಯಾಗಿ ನಿಂತರು.

ಸ್ವಾಮಿ ವಿವೇಕಾನಂದರು ಒಬ್ಬ ವ್ಯಕ್ತಿಯನ್ನು ಸ್ತ್ರೀ ಪುರುಷ ಎಂದು ವಿಂಗಡಿಸಿ ನೋಡದೆ ಕೇವಲ ಮನುಷ್ಯನನ್ನಾಗಿ ನೋಡಿದರು. ಮನುಷ್ಯರನ್ನು ದುರ್ಬಲತೆಯಿಂದ ಮುಕ್ತಗೊಳಿಸಲು ಆತ್ಮಭಾವಕ್ಕೆ ಪ್ರಾಧಾನ್ಯತೆಯನ್ನು ನೀಡಿದರು. ವೇದಾಂತದ ಬೆಳಕಿನಲ್ಲಿ ಸೇವೆ ಮತ್ತು ಆಧ್ಯಾತ್ಮಿಕ ಸಾಧನೆಯ ಹೊಸ ಮಾರ್ಗವನ್ನು ತೋರಿಸಿದರು. ಹೀಗೆ ಸ್ವಾಮೀಜಿಯ ಜೀವನ ಮತ್ತು ಉಪದೇಶಗಳು ಸಂನ್ಯಾಸಿ ಜೀವನದ ಪವಿತ್ರತೆ ಮತ್ತು ತ್ಯಾಗದ ಆದರ್ಶದತ್ತ ಸಾಧಾರಣ ಮನುಷ್ಯರನ್ನು ಆಕರ್ಷಿಸಿದವು. ಮುಖ್ಯವಾಗಿ 'ಶಾರದಾ ಮಠ'ಕ್ಕೆ ಅಂಕುರಾರ್ಪಣೆ ಮಾಡಿದ ಅವರ ಘನಕಾರ್ಯವು ಭಾರತೀಯ ಮಹಿಳೆಯರ ಉದ್ಧಾರಕ್ಕೆ ನಾಂದಿಯಾಯಿತು.


Fourth (Revised) Reprint!

***A Concise Encyclopaedia of***

***HINDUISM***

(in three volumes)

***by Swami Harshananda***

**Price per set of three volumes: Rs.2000/-**

Features

- Covers all aspects of Hindu Religion, Philosophy and culture
- Printed on natural shade, superior quality maplitho paper
- Binding in full calico with multi-colour cover
- Size: Crown Quarto (24 X 18 cm.)
- Total number of pages in 3 volumes: 2120
- Contains 197 line drawings and 124 photographs
- Weight (3 volumes): 6kg


RAMAKRISHNA MATH
Bull Temple Road
Bangalore - 560 019
Phone: 26616161/26613149
email: bookstall@rkmathbangalore.org
rkmblr@dataone.in

# ವಿವೇಕಾನಂದರು ಮತ್ತು ಭಾರತೀಯ ಮಹಿಳೆಯರ ಉದ್ಧಾರ

ಮಾತಾ ತ್ಯಾಗಮಯೀ

**ಭಾರತೀಯ ಸಮಾಜದಲ್ಲಿ ಮಹಿಳೆಯರ ಪಾತ್ರ ಹಿರಿದಾದುದು. ಆದರೆ ಕಳೆದ ಹಲವು ಶತಮಾನಗಳಲ್ಲಿ ಅವರ ಸ್ಥಿತಿ ಚಿಂತಾಜನಕವಾಗಿದೆ. ಅವರ ಉದ್ಧಾರವಾಗದೆ ಭಾರತದ ಉದ್ಧಾರ ಸಾಧ್ಯವಿಲ್ಲ. ಆದರೆ ಮಹಿಳೆಯರ ಉದ್ಧಾರದ ಮಾರ್ಗವನ್ನು ಅವರೇ ಕಂಡುಕೊಳ್ಳಬೇಕು. ಸ್ವಾಮೀಜಿಯವರು ಮಹಿಳೆಯ ಉದ್ಧಾರಕ್ಕಾಗಿ ನೀಡಿದ ಪರಿಹಾರೋಪಾಯಗಳನ್ನು ಶ್ರೀಮಾತೆ ಶಾರದಾದೇವಿಯವರ ವ್ಯಕ್ತಿತ್ವದ ಬೆಳಕಿನಲ್ಲಿ ಮೋಹಕ ಶೈಲಿಯಲ್ಲಿ ವಿವರಿಸಿರುವ ಮಾತಾಜಿಯವರು ಚಳ್ಳಕೆರೆಯಲ್ಲಿರುವ ಶ್ರೀಶಾರದಾಶ್ರಮದ ಮುಖ್ಯಸ್ಥರಾಗಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು.**

ಬಾಲಕ ನರೇಂದ್ರ (ಸ್ವಾಮಿ ವಿವೇಕಾನಂದರು) ತನ್ನ ತಾಯಿಯ ತೊಡೆಯ ಮೇಲೆ ಕುಳಿತುಕೊಂಡು ಹಿಂದೂ ಸಂಸ್ಕೃತಿಯ ಮೂಲಭೂತ ಪಾಠಗಳನ್ನು ಕಲಿತನು. ತಾಯಿ ಮತ್ತು ಅಜ್ಜಿಯರು ಹೇಳುತ್ತಿದ್ದಂಥ ರಾಮಾಯಣ–



ಮಹಾಭಾರತ–ಭಾಗವತದ ಕಥೆಗಳು ಬಾಲಕನ ಬಗೆಗಣ್ಣಿಗೆ ಹೊಸ ಆದರ್ಶದ ಲೋಕವನ್ನೇ ಪರಿಚಯಿಸಿಕೊಟ್ಟವು. ಬಾಲ್ಯದಿಂದಲೇ 'ಸೀತಾ', 'ಸಾವಿತ್ರಿ', 'ಸತೀ' – ಈ ಮೂರು ಶಬ್ದಗಳು ಬಾಲಕನಿಗೆ ಪ್ರಿಯವಾಗಿದ್ದವು.

ಬೆಳೆಯುತ್ತಿದ್ದಂತೆ ಆ ಮೂರು ಶಬ್ದಗಳ ಘನತೆ, ಅರ್ಥವ್ಯಾಪ್ತಿ ಮತ್ತು ಗಾಂಭೀರ್ಯಗಳು ಅವನಿಗೆ ಮತ್ತಷ್ಟು ವಿಶದವಾದುವು. ಶ್ರೀಮಾತೆ ಶ್ರೀಶಾರದಾದೇವಿಯವರ ಪರಮ ನಿರಹಂಕೃತಿಯ ಮೌನ–ದೀಪ್ತ ಚಾರಿತ್ರ್ಯವನ್ನು ಅವಲೋಕಿಸಿದ ಮೇಲಂತೂ ಸೀತಾ–ಸಾವಿತ್ರಿ–ಸತೀ ಶಬ್ದಗಳು ಇನ್ನಷ್ಟು ಜೀವಂತವಾದವು. ಯುವ ಸಂನ್ಯಾಸಿ ತಮ್ಮ ಪರಿವ್ರಜನದ ದಿನಗಳಲ್ಲಿ ಆದರ್ಶದ ಶಿಖರದಿಂದ ಕೆಳಗಿಳಿದು ಬಂದು ವಾಸ್ತವದ ವಿಪರ್ಯಾಸಗಳನ್ನು ಗಮನಿಸದಿರಲಿಲ್ಲ. ಅವರ ಎದೆ ಬೇಯದಿರಲಿಲ್ಲ. ಮನೆಯವರ ಕಿರುಕುಳಗಳಿಂದ ನೊಂದ ತನ್ನ ಅಕ್ಕನ ಆತ್ಮಹತ್ಯೆಯ ವಿಷಯವನ್ನು ಕೇಳಿ, ಭಾರತೀಯ ಮಹಿಳೆಯರೆಲ್ಲರ ದುಃಖ–ದುರ್ದಶೆ–ಅಸಹಾಯಕತೆಗಳನ್ನು ನೆನೆದು ಅವರ ಮಾತೃಹೃದಯ ಅತೀವವಾಗಿ ಚಿಂತಿತವಾಗಿತ್ತು. ಪಾಶ್ಚಾತ್ಯ ಮಹಿಳೆಯರ ಕಾರ್ಯದಕ್ಷತೆ, ವ್ಯವಹಾರಪ್ರಜ್ಞೆ, ವಿಶಾಲ ದೃಷ್ಟಿಕೋನ ಹಾಗೂ ಅವರ ಅನುಕೂಲಕರ ಜೀವನ ಸನ್ನಿವೇಶಗಳನ್ನು ಕಂಡು ತಮ್ಮ ಮಾತೆಯರನ್ನು, ಭಗಿನಿಯರನ್ನು ಅವರು ಮತ್ತೆ ಮತ್ತೆ ನೆನಪಿಸಿಕೊಂಡರು. ಅವರು ಅಮೆರಿಕದಲ್ಲಿ ಎಷ್ಟೋ ಬಾರಿ ನಿರಂತರವಾಗಿ ಆದರ್ಶ ಭಾರತೀಯ ನಾರಿಯರ ಚಿತ್ರಣವನ್ನು ತಮ್ಮ ಮನೋರಾಜ್ಯದಲ್ಲಿ ಸಂಕಲ್ಪಪೂರ್ವಕವಾಗಿ ಕೆತ್ತುತ್ತಿದ್ದರು. ಭಾರತೀಯ ತಾಯಿ ಮತ್ತೊಮ್ಮೆ ಸೀತಾ, ಸಾವಿತ್ರಿ, ಸತಿಯಾಗುವುದು ಹೇಗೆ ಎಂದು ಅವರ ಋಷಿದೃಷ್ಟಿಯು ಪರ್ಯಾಲೋಚಿಸಿ, ಆ ದಿಸೆಯಲ್ಲಿ ನಿವೇದಿತೆ ಹಾಗೂ ಹಲಕೆಲವು ಶಿಷ್ಯೆಯರ ಮೂಲಕ ತನ್ನ ಕಾರ್ಯಾರಂಭವನ್ನು ಮಾಡಿತ್ತು.

ಸ್ವಾಮೀಜಿಯವರು ಮತ್ತೆ ಮತ್ತೆ ಹೇಳುತ್ತಿದ್ದ ಒಂದು ಪ್ರಮುಖ ಮಾತು ಇದು: "ಮಹಿಳೆಯರಿಗೆ ಗೌರವವನ್ನು ಕೊಡುವುದರ ಮೂಲಕ ಪ್ರತಿಯೊಂದು ರಾಷ್ಟ್ರವೂ ಮೇಲಕ್ಕೆ ಬಂದಿದೆ. ಯಾವ ರಾಷ್ಟ್ರ ಮತ್ತು ಜನಾಂಗ ಮಹಿಳೆಯರನ್ನು ಗೌರವಿಸುವುದಿಲ್ಲವೋ ಆ ರಾಷ್ಟ್ರ ಯಾವತ್ತೂ ಮಹಿಮಾನ್ವಿತವಾಗಿಲ್ಲ, ಮುಂದೆ ಆಗುವುದೂ ಇಲ್ಲ... ಒಂದು ರೆಕ್ಕೆಯಿಂದ ಹಾರಲು ಯತ್ನಿಸುವ ಹಕ್ಕಿ ನೆಲಕ್ಕುರುಳುವುದು ನಿಶ್ಚಿತ." ಆತ್ಮನ ಏಕತೆಯನ್ನು ಮತ್ತು ಆತ್ಮನ ಮಹಿಮೆಯನ್ನು ಸಾರಿದ ಈ ದೇಶದಲ್ಲಿ ಸ್ತ್ರಿ–ಪುರುಷರ ನಡುವೆ ಭೇದಭಾವವನ್ನು ಮಾಡಿದುದನ್ನು ಸ್ವಾಮೀಜಿ ತೀಕ್ಷ್ಣವಾಗಿ ಖಂಡಿಸುತ್ತಾರೆ.

### ಭಾರತೀಯ ಮಹಿಳೆಯರ ಉದ್ಧಾರ : ಶ್ರೀಶಾರದಾದೇವಿಯವರ ಅವತರಣ

ಸ್ವಾಮೀಜಿಯವರು ಶ್ರೀಮಾತೆ ಶ್ರೀಶಾರದಾದೇವಿಯವರ